**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 08.06.2021

# ಮೋಟಾರ್ ಸೈಕಲ್ ಕಳ್ಳನ ಬಂಧನ

ದಿನಾಂಕ 08.06.2021 ರಂದು 13:00 ಗಂಟೆಗೆ ವಿಜಯಪುರ ಗ್ರಾಮೀಣ ಪಿ.ಎಸ್ ಗುನ್ಹಾ ನಂಬರ 157-2021 ಕಲಂ 379, 380 ಐಪಿಸಿ ನೇದ್ದರ ಪ್ರಕರಣದಲ್ಲಿ ಆರೋಪಿ ತಪಾಸಣೆ ಕುರಿತು, ವಿಜಯಪುರ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಐನಾಪೂರ ಗ್ರಾಮದ ಹತ್ತಿರ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ, ಒಬ್ಬ ಮೋಟರ ಸೈಕಲ್ ಚಾಲಕನು ಸಂಶಯಾಸ್ಪದ ರೀತಿಯಲ್ಲಿ ಕಂಡು ಬಂದಿದ್ದರಿಂದ ವಿಚಾರಣೆಗೆ ಒಳಪಡಿಸಿದ್ದು, ಆತನು ತನ್ನ ಹೆಸರು ಮೊಹ್ಮದ ತಂ ಹಸನಸಾಬ ಜಾತಗಾರ ವಯಾ 28 ವರ್ಷ ಸಾ॥ ಆಹೇರಿ ಅಂತಾ ಹೇಳಿದ್ದು, ಸದರಿಯವನಿಗೆ ಚೆಕ್ ಮಾಡಲು ಆರೋಪಿ ಹತ್ತಿರ ಒಂದು ಮೋಟರ ಸೈಕಲ್ ಹಾಗೂ ವಿವಿಧ ಕಂಪನೀಯ 14 ಮೋಬೈಲ್‌ಗಳನ್ನು ಜಪ್ತ ಮಾಡಿದ್ದು ಇರುತ್ತದೆ.

**ಆರೋಪಿತನಾದ**

- **ಮೊಹ್ಮದ ತಂ ಹಸನಸಾಬ ಜಾತಗಾರ ವಯಾ 28 ವರ್ಷ ಸಾ॥ ಆಹೇರಿ.**

**ಇತನ್ನು ದಸ್ತಗೀರ ಮಾಡಿ ಆತನ ತಾಬಾದಿಂದ**

- ಒಂದು ಮೋಟರ ಸೈಕಲ್ ಆಕಿ:50,00/- ಹಾಗೂ
- ವಿವಿಧ ಕಂಪನೀಯ 14 ಮೋಬೈಲ್‌ಗಳು ಒಟ್ಟು ಅ.ಕಿ:1.50.000/- ನೇದ್ದವುಗಳನ್ನು ವಶಪಡಿಸಿಕೊಂಡು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು ಇರುತ್ತದೆ.

ಸದರಿ ಪ್ರಕರಣದ ಪತ್ತೆ ಕಾರ್ಯದಲ್ಲಿ ಶ್ರೀ ಅನುಪಮ್ ಅಗ್ರವಾಲ್ ಐಪಿಎಸ್. ಪೊಲೀಸ್ ಅಧೀಕ್ಷಕರು ವಿಜಯಪುರ ರವರ ಮಾರ್ಗದರ್ಶನದಲ್ಲಿ, ಕಾರ್ಯನಿರ್ವಹಿಸಿದ ಡಾ॥ ರಾಮ್. ಎಲ್.ಅರಸಿದ್ದಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು ವಿಜಯಪುರ, ಶ್ರೀ ಕೆ.ಸಿ.ಲಕ್ಷ್ಮೀನಾರಾಯಣ, ಡಿ.ಎಸ್.ಪಿ ವಿಜಯಪುರ ಹಾಗೂ ಶ್ರೀ ಸಂಗಮೇಶ ಪಾಲಭಾವಿ ಸಿಪಿಐ ವಿಜಯಪುರ ಗ್ರಾಮೀಣ ವೃತ್ತ ತನಿಖೆಯ ನೇತ್ರತ್ವವಹಿಸಿದ ಶ್ರೀ ಆನಂದ ಟಕ್ಕನ್ನವರ ಪಿಎಸ್‌ಐ (ಕಾ&ಸೂ) ವಿಜಯಪುರ ಗ್ರಾಮಿಣ ಪೊಲೀಸ್ ಠಾಣೆ ಹಾಗು ಶ್ರೀಮತಿ ಆರ್.ಎ.ದಿನ್ನಿ ಹೆಚ್ಚುವರಿ ಪಿ.ಎಸ್.ಐ ವಿಜಯಪುರ ಗ್ರಾಮಿಣ ಪೊಲೀಸ್ ಠಾಣೆ ಹಾಗು ಸಿಬ್ಬಂಧಿಯವರಾದ ಆಯ್.ವಾಯ್.ದಳವಾಯಿ ಪಿಸಿ 538, ದಿಲೀಪ್ ಚಿಗದೋಳ ಪಿಸಿ-1656, ಎಸ್.ಎಸ್.ನಾಟಿಕಾರ ಪಿಸಿ-857 ರವರ ಕರ್ತವ್ಯವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿರುತ್ತಾರೆ.

ಪೊಲೀಸ್ ಅಧೀಕ್ಷಕರು
ವಿಜಯಪುರ ಜಿಲ್ಲೆ

ಗೆ,

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ವಿಜಯಪುರ.
ಹಾಗೂ ವಿಜಯಪುರ. ಜಿಲ್ಲೆಯ ಎಲ್ಲ ಪತ್ರಕರ್ತಕರು ಹಾಗೂ ಛಾಯಾಗ್ರಾಹಕರು


ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆ